ಓ.ಎಸ್. – 41/2024

ಪಿ. ಡಬ್ಲ್ಯೂ – 2

ಸಾಕ್ಷಿಯನ್ನು ದಿಃ 28.03.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್.ಎಸ್.ಹೆಚ್ ರವರಿಂದ**

**1.** ವಾದಿ ಮತ್ತು ಪ್ರತಿವಾದಿಯರು ನನಗೆ ಗೊತ್ತು. ನಾನು ಕಿರಾಣಿ ಅಂಗಡಿಯನ್ನು ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದೇನೆ. ನಾನು ವ್ಯಾಪಾರದೊಂದಿಗೆ ಬೇರೆ ಯಾವುದೇ ಕೆಲಸ ಮಾಡುತ್ತಿಲ್ಲ. ನಿಪಿ–1

ರಲ್ಲಿ ಕಂಡ ದುರ್ಗಪ್ಪ ಮತ್ತು ಅವನ ಕುಟುಂಬಸ್ಥರು ನನಗೆ ಗೊತ್ತು. ಸದರಿ ದುರ್ಗಪ್ಪನು ನಮ್ಮ ಊರಿನವನು. ದುರ್ಗಪ್ಪನು ಸಾಕಷ್ಟು ವರ್ಷಗಳಿಂದ ಮದ್ಯಪಾನ ಮಾಡುವ ಹವ್ಯಾಸವನ್ನು ಹೊಂದಿದ್ದ ಎಂದರೆ ಸರಿ. ಆ ಕಾರಣದಿಂದ ಕ್ರಮೇಣ ಅವರು ಬಹು ಅಂಗಾಂಗಗಳ ವೈಫಲ್ಯವಾಗಿ ಅವರ ಮಾನಸಿಕ ಆರೋಗ್ಯ ಹದಗೆಟ್ಟಿತ್ತು ಎಂದರೆ ಸರಿಯಲ್ಲ. ಅವರ ಮೃತ ಪಡುವ 2–3 ವರ್ಷಗಳ ಅವಧಿಯಲ್ಲಿ ದುರ್ಗಪ್ಪನ ಹೆಂಡತಿ ಮತ್ತು ಮಕ್ಕಳು ಅವರಿಗೆ ಚಿಕಿತ್ಸೆ ಕೊಡಿಸುತ್ತಿದ್ದರು ಎಂದರೆ ಸರಿಯಲ್ಲ. ಮುಂದುವರೆದು ಅವರು ಆರೋಗ್ಯವಾಗಿಯೇ ಇದ್ದರು ಎನ್ನುತ್ತಾರೆ. ಮರಣ ಶಾಸನವನ್ನು ಎಲ್ಲಿ ಬೆರಳಚ್ಚು ಮಾಡಿದರು ಎಂದು ನನಗೆ ಗೊತ್ತಿಲ್ಲ. ಅದನ್ನು ಪಿಡಬ್ಲ್ಯೂ-4 ರವರು ತಯಾರಿಸಿದ್ದಾರೆ ಎಂದು ನನಗೆ ತಿಳಿದಿದೆ. ಪಿಡಬ್ಲ್ಯೂ-4 ರವರ ಕಚೇರಿಗೆ ನಾನು ನಿಪಿ–1 ರ ಸಲುವಾಗಿ ಹೋಗಿಲ್ಲ. ನೇರವಾಗಿ ಉಪ ನೊಂದಣಾಧಿಕಾರಿಗಳ ಕಚೇರಿಗೆ ಹೋಗಿದ್ದೆ.

**2.** ನಿಪಿ–1 ಕ್ಕೆ ಸಂಬಂಧಪಟ್ಟಂತೆ ನಾನು ಎರಡು ಸಹಿಗಳನ್ನು ಮಾಡಿದ್ದೇನೆ. ಉಪ ನೊಂದಣಾಧಿಕಾರಿಗಳ ಕಚೇರಿಗೆ ನಾನು ಹೋಗಿದ್ದಾಗ ವಾದಿ ಅಥವಾ ಗಂಡ ಬಂದಿರಲಿಲ್ಲ. ನಿಪಿ–1 ರಲ್ಲಿ ಬರೆದಿರುವ ಮಾಹಿತಿ ನನಗೆ ಗೊತ್ತು. ವಾದಿಯು ದುರ್ಗಪ್ಪನ ಸಂಬಂಧಿಕಳಲ್ಲ ಎಂದರೆ ಸರಿ. ಮರಣ ಶಾಸನ ಬರೆಯುವ ಸಂದರ್ಭದಲ್ಲಿ ವಾದಿ ನಿನ್ನ ಸಂಬಂಧಿಕಳಲ್ಲ, ನಿನಗೆ ಹೆಂಡತಿ ಮಕ್ಕಳು ಇದ್ದಾರೆ, ಆದರೂ ಸಹ ಏಕೆ ಅವಳಿಗೆ ನಿನ್ನ ಆಸ್ತಿಯನ್ನು ಮರಣ ಶಾಸನದ ಮೂಲಕ ಕೊಡುತ್ತಿದ್ದೀಯಾ ಎಂದು ದುರ್ಗಪ್ಪನನ್ನು ನಾನು ವಿಚಾರಣೆ ಮಾಡಿದ್ದೇನೆ. ಆಗ ಸದರಿ ದುರ್ಗಪ್ಪನು ವಾದಿ ನನ್ನನ್ನು ನೋಡಿಕೊಂಡಿದ್ದಾರೆ, ಅಲ್ಲದೆ ಸದರಿ ನಿಪಿ–1 ರ ಶೆಡ್ಯೂಲ್ ಸ್ವತ್ತು ನನ್ನ ಸ್ವಯಾರ್ಜಿತ ಆಸ್ತಿ ಆಗಿರುವುದರಿಂದ, ನನ್ನ ಅನಾರೋಗ್ಯದ ಸಂದರ್ಭದಲ್ಲಿ ಚಿಕಿತ್ಸೆಗಾಗಿ ವಾದಿಯು ಹಣ ಕೊಟ್ಟಿದ್ದರಿಂದ ನಾನು ಅವಳಿಗೆ ಸದರಿ ಸ್ವತ್ತನ್ನು ಮರಣ ಶಾಸನದ ಮೂಲಕ ಕೊಡುತ್ತಿದ್ದೇನೆ ಎಂದು ಹೇಳಿದರು. ಕ್ರಯ ಪತ್ರವನ್ನು ಮಾಡಿಕೊಡಲು ನಿಮಗೆ ಏನು ತೊಂದರೆ ಎಂದು ನಾನು ದುರ್ಗಪ್ಪನನ್ನು ಕೇಳಿಲ್ಲ.

**3.** ಆವಿನಹಳ್ಳಿ ವ್ಯಾಪ್ತಿಯಲ್ಲಿ ಖುಷ್ಕಿ ಜಮೀನಿಗೆ ಹಾಗೂ ರಸ್ತೆಯ ಪಕ್ಕ ಇರುವ ಜಮೀನುಗಳಿಗೆ ಹೆಚ್ಚಿನ ಬೆಲೆ ಇದೆ ಎಂದರೆ ಸರಿಯಲ್ಲ. ಆವಿನಹಳ್ಳಿ ವ್ಯಾಪ್ತಿಯಲ್ಲಿ ಖುಷ್ಕಿ ಜಮೀನಿನ ಪ್ರತೀ ಎಕರೆಗೆ ಸುಮಾರು 40–50 ಲಕ್ಷ ಬೆಲೆ ಇತ್ತೀಚೆಗೆ ಆಗಿರಬಹುದು. ಆದರೆ ನಿಪಿ–1 ರ ಮರಣ ಶಾಸನದ ಕಾಲಕ್ಕೆ ಪ್ರತೀ ಎಕರೆಗೆ ಸುಮಾರು 1–1.50 ಲಕ್ಷ ಬೆಲೆ ಇತ್ತು. ನಿಪಿ–1 ರ ಶೆಡ್ಯೂಲ್ ಸ್ವತ್ತಿನಲ್ಲಿ ನಿಪಿ–1 ರ ಕಾಲಕ್ಕೆ ಒಂದು ಸಣ್ಣ ಗುಡಿಸಲು ಇತ್ತು. ಸದರಿ ಸ್ವತ್ತಿನಲ್ಲಿ ಮನೆ ಇದ್ದ ಕಾರಣ ನಿಪಿ–1 ರ ಕಾಲಕ್ಕೆ ಸುಮಾರು 20–

30 ಲಕ್ಷ ಬೆಲೆ ಬಾಳುತ್ತಿತ್ತು ಎಂದರೆ ಸರಿಯಲ್ಲ. ದುರ್ಗಪ್ಪನಿಗೆ ಕುಡಿತದ ಚಟ ಇದ್ದು, ಮಾನಸಿಕ ಅಸ್ವಸ್ಥನಾಗಿದ್ದ ಕಾರಣ ನಾನು, ವಾದಿ ಹಾಗೂ ಇತರೆ ಸಾಕ್ಷಿದಾರರ ಸೇರಿ ಪರಸ್ಪರ ಮಿಲಾಪಿಯಾಗಿ ಕಾನೂನುಬಾಹೀರವಾಗಿ ದುರ್ಗಪ್ಪನಿಂದ ನಿಪಿ-1 ರ ದಾಖಲೆಗೆ ಸಹಿ ಪಡೆದಿದ್ದೇವೆ ಎಂದರೆ ಸರಿಯಲ್ಲ.

**4.** ನಾನು ಮತ್ತು ಪ್ರಾ.ಸಾ-3 ರವರು ರಿಯಲ್ ಎಸ್ಟೇಟ್ ವ್ಯವಹಾರವನ್ನು ಮಾಡುತ್ತಿದ್ದು ,ಹಣಕಾಸಿನ ಲಾಭಕ್ಕಾಗಿ ನಿಪಿ-1 ರ ದಾಖಲೆಯನ್ನು ವಾದಿಯೊಂದಿಗೆ ಸೇರಿ ಸೃಷ್ಟಿ ಮಾಡಿ, ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.